# HOSA DIGANTHA

Saturday, March 20th, 2010

ಎಸ್‌ಎಇ ಏರೋ ಡಿಸೈನ್ ಸ್ಪರ್ಧೆ

## ಜೈನ್ ಕಾಲೇಜು ತಂಡಕ್ಕೆ ಬಹುಮಾನ

**ಬೆಂಗಳೂರು:** ಭಗವಾನ್ ಮಹಾವೀರ್ ಜೈನ್ ಎಂಜಿನಿಯರಿಂಗ್ ಕಾಲೇಜು ತಂಡವು ಅಮೆರಿಕಾದ ಕ್ಯಾಲಿಫೋರ್ನಿಯಾದಲ್ಲಿ ಇತ್ತೀಚೆಗೆ ನಡೆದ ಅಂತಾರಾಷ್ಟ್ರೀಯ ಎಸ್‌ಎಇ ಏರೋ ಡಿಸೈನ್ ಸ್ಪರ್ಧೆಯ ಎರಡು ವಿಭಾಗದಲ್ಲಿ ಕ್ರಮವಾಗಿ ಪ್ರಥಮ ಹಾಗೂ ತೃತೀಯ ಸ್ಥಾನ ಪಡೆದು ಇತಿಹಾಸ ನಿರ್ಮಿಸಿದೆ.

ಸ್ಪರ್ಧೆಯಲ್ಲಿ ಅಮೆರಿಕಾ ಹಾಗೂ ಯೂರೋಪ್ ದೇಶಗಳ ಕೆಲವು ಪ್ರತಿಷ್ಠಿತ ತಾಂತ್ರಿಕ ಸಂಸ್ಥೆಗಳು ಸೇರಿದಂತೆ ವಿಶ್ವದ ವಿವಿಧೆಡೆಯಿಂದ 44 ತಂಡಗಳು ಪಾಲ್ಗೊಂಡಿದ್ದವು.

ತಾಂತ್ರಿಕ ತಜ್ಞರನ್ನೊಳಗೊಂಡ ಸೊಸೈಟಿ ಆಫ್ ಆಟೋಮೋಟಿವ್ ಎಂಜಿನಿಯರ್ಸ್ (ಎಸ್‌ಎಇ) ಸಂಸ್ಥೆಯು ನಾಸಾ ಹಾಗೂ ಲಾಖೀದ್ ಮಾರ್ಟಿನ್ ಸಂಸ್ಥೆಗಳ ಸಹಭಾಗಿತ್ವದಲ್ಲಿ ಈ ಸ್ಪರ್ಧೆ ಆಯೋಜಿಸಿತ್ತು. ಸ್ಪರ್ಧೆಯಲ್ಲಿ ರೆಗ್ಯುಲರ್ ಕ್ಲಾಸ್, ಓಪನ್ ಕ್ಲಾಸ್ ಹಾಗೂ ಮೈಕ್ರೋ ಕ್ಲಾಸ್ ಎಂದು ಮೂರು ವಿಭಾಗಗಳನ್ನು ವಿಂಗಡಿಸಲಾಗಿತ್ತು.

ಭಗವಾನ್ ಮಹಾವೀರ್ ಜೈನ್ ಎಂಜಿನಿಯರಿಂಗ್ ಕಾಲೇಜು ತಂಡವು ಭಾರತವನ್ನು ಪ್ರತಿನಿಧಿಸಿದ್ದು, ಓರಲ್ ಪ್ರಸೆಂಟೇಷನ್‌ನಲ್ಲಿ ಪ್ರಥಮ ಹಾಗೂ ಸೂಕ್ಷ್ಮ (ಮೈಕ್ರೋ ಕ್ಲಾಸ್ ) ವಿಭಾಗದಲ್ಲಿ ತೃತೀಯ ಸ್ಥಾನ ಪಡೆಯುವಲ್ಲಿ ಯಶಸ್ವಿಯಾಗಿದೆ.

